ಸೆಲೆಬ್ರಿಟಿ

# ಕೃಷಿಕರ ಕಣ್ಮಣಿ



■ ಪ್ರವೀಣ ಕುಲಕರ್ಣಿ

ರಾಷ್ಟ್ರದ ರಾಜಧಾನಿ ನವದೆಹಲಿಯ ಗಡಿಯಲ್ಲಿ ರೈತ ಚಳವಳಿ ಅಷ್ಟೊಂದು ಅಚಲವಾಗಿ ನಿಲ್ಲಲು, ನಿಂತು ಮುಂದುವರಿಯಲು ಕಾರಣರಾದ ಮುಖಂಡರಲ್ಲಿ ರಾಕೇಶ್ ಟಿಕಾಯತ್ ಪ್ರಮುಖರು. ಅವರು ಭಾರತೀಯ ಕಿಸಾನ್ ಒಕ್ಕೂಟದ ಪ್ರಮುಖ ನಾಯಕ. ಒಂದೊಮ್ಮೆ ದೆಹಲಿ ಪೊಲೀಸ್ ಪಡೆಯಲ್ಲಿ ಸಬ್ ಇನ್ಸ್‌ಪೆಕ್ಟರ್ ಆಗಿದ್ದವರು. ಈಗ ಅದೇ ಪೊಲೀಸ್ ಪಡೆಯ ವಿರುದ್ಧ ತೊಡೆ ತಟ್ಟಿ ನಿಂತು ಚಳವಳಿಯನ್ನು ಮುನ್ನಡೆಸುತ್ತಿರುವವರು. ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರದ ವಿರುದ್ಧ ಗುಡುಗುತ್ತಿರುವ ಈ ರೈತ ನಾಯಕ, 'ಏನು ಮಾಡುವುದು, 2019ರ ಲೋಕಸಭಾ ಚುನಾವಣೆಯಲ್ಲಿ ನಾನು ಇದೇ ಬಿಜೆಪಿಗೆ ಮತ ಹಾಕಿದ್ದೆ' ಎಂದು ಹೇಳಲೂ ಹಿಂಜರಿಯುವುದಿಲ್ಲ. 'ಆ ಪಕ್ಷಕ್ಕೆ ಮತ ಹಾಕಬೇಡಿ' ಎಂದು ಈಗ ಹೋದಲ್ಲೆಲ್ಲ ಹೇಳುತ್ತಿರುವವರು.

ದೇಶದ ರೈತ ಚಳವಳಿಯಲ್ಲಿ ಟಿಕಾಯತ್ ಕುಟುಂಬದ್ದು ಬಹುದೊಡ್ಡ ಹೆಸರು. ರಾಕೇಶ್ ಅವರ ತಂದೆ ಮಹೇಂದ್ರ ಸಿಂಗ್ ಅವರು ಭಾರತೀಯ ಕಿಸಾನ್ ಒಕ್ಕೂಟದ ಸಂಸ್ಥಾಪಕರಲ್ಲಿ ಒಬ್ಬರು. ಉತ್ತರ ಪ್ರದೇಶದ, ಅಷ್ಟೇ ಏಕೆ, ಉತ್ತರ ಭಾರತದ ಬಹುದೊಡ್ಡ ರೈತ ನಾಯಕರಾಗಿ ರೂಪುಗೊಂಡವರು. ನಮ್ಮ ಎಂ.ಡಿ. ನಂಜುಂಡಸ್ವಾಮಿ ಅವರಂತೆ ವಿದ್ವತ್ ಪ್ರಭೆಯಿಂದ ಕಂಗೊಳಿಸದಿದ್ದರೂ ರೈತರ ಸಮಸ್ಯೆಗಳ ಅರಿವಿದ್ದ, ಹೋರಾಟದ ಕೆಚ್ಚು ತುಂಬಿಕೊಂಡಿದ್ದ ಗಟ್ಟಿಗ ಅವರು. ರಾಕೇಶ್ ಅವರ ಸಹೋದರ ನರೇಶ್ ಈಗ ಒಕ್ಕೂಟದ ಅಧ್ಯಕ್ಷರು. ರಾಜಕೀಯ ಅಖಾಡಕ್ಕೂ ಧುಮುಕಿದ್ದ ರಾಕೇಶ್, 2007ರಲ್ಲಿ ಉತ್ತರಪ್ರದೇಶದಿಂದ ವಿಧಾನಸಭೆ ಚುನಾವಣೆಯಲ್ಲೂ ಸ್ಪರ್ಧಿಸಿದ್ದರು. 2014ರ ಲೋಕಸಭಾ ಚುನಾವಣೆಯಲ್ಲೂ ಸ್ಪರ್ಧಿಸಿ, ಠೇವಣಿಯನ್ನು ಕಳೆದುಕೊಂಡಿದ್ದರು.

ಕೃಷಿ ಕಾಯ್ದೆಗಳ ವಿರುದ್ಧ ರಾಕೇಶ್ ಅವರು ಹೋರಾಟಕ್ಕೆ ಧುಮುಕಿದಾಗ, ಪಂಜಾಬ್‌ನ ಬಲಿಷ್ಠ ರೈತ ಸಂಘಟನೆಗಳ ನಡುವೆ ಒಡಕು ಮೂಡಿಸಲು ಕೇಂದ್ರವೇ ಅವರನ್ನು ಅಖಾಡಕ್ಕೆ ಇಳಿಸಿದೆ ಎಂಬ ಗುಸುಗುಸು ಹರಡಿತ್ತು. ಆದರೆ, ಗಾಜಿಪುರದಲ್ಲಿ ಅವರು ಮಾಡಿದ ಭಾಷಣ ಅವರ ಮೇಲಿನ ಎಲ್ಲ ಆರೋಪಗಳನ್ನು ದೂರು ಮಾಡಿತು. 'ಕೃಷಿ ಕಾಯ್ದೆಗಳನ್ನು ವಾಪಸ್ ಪಡೆಯದಿದ್ದರೆ ನಾನು ನೇಣು ಹಾಕಿಕೊಳ್ಳಲೂ ಹಿಂಜರಿಯುವುದಿಲ್ಲ' ಎಂದು ಅವರು ಗುಡುಗಿದ್ದರು. 'ಹರ್ ಕಿಸಾನ್ ರೋಯಾ ಔರ್ ಸಭಿ ಕೊ ಮಹೇಂದ್ರ ಸಿಂಗ್‌ಜಿ ಯಾದ್ ಆಯಾ' (ಅವರ ಮಾತಿಗೆ ಪ್ರತಿಯೊಬ್ಬ ರೈತ ಕಣ್ಣೀರು ಹಾಕಿದ ಮತ್ತು ಎಲ್ಲರಿಗೂ ಮಹೇಂದ್ರ ಸಿಂಗ್ ಅವರ ನೆನಪು ಬಂತು) ಎಂದು ಆ ಸಭೆಗೆ ಸಾಕ್ಷಿಯಾದ ಮುಖಂಡರು ಹೇಳುತ್ತಾರೆ.

ರಾಕೇಶ್ ಅವರ ಆ ಒಂದು ಭಾವನಾತ್ಮಕ ಭಾಷಣ ಇಡೀ ರೈತ ಸಮುದಾಯವನ್ನು ಒಂದುಗೂಡಿಸಿತು. ಉತ್ತರಪ್ರದೇಶ, ಹರಿಯಾಣ, ಪಂಜಾಬ್, ರಾಜಸ್ಥಾನ ಮತ್ತು ದೆಹಲಿ ರೈತರೆಲ್ಲ ಒಂದಾಗಿ ಚಳವಳಿಯನ್ನು ಗಟ್ಟಿಯಾಗಿ ನಿಲ್ಲಿಸಿದರು. ಚಳವಳಿ ಇಂದಿಗೂ ಅಚಲವಾಗಿ ನಿಲ್ಲಲೂ ಆಧಾರವಾದರು. ರಾಕೇಶ್ ಅವರ ತಂದೆ ಮಹೇಂದ್ರ ಸಿಂಗ್ ಅವರು 1987–88ರಲ್ಲಿ ಇಂತಹದ್ದೇ ಗಟ್ಟಿಯಾದ ಚಳವಳಿ ರೂಪುಗೊಳ್ಳಲು ಕಾರಣವಾಗಿದ್ದರು. ವಿದ್ಯುತ್ ದರ ಹೆಚ್ಚಳದ ವಿರುದ್ಧ ಹಾಗೂ ಕಬ್ಬಿಗೆ ಬೆಂಬಲ ಬೆಲೆ ನೀಡುವಂತೆ ಆಗ್ರಹಿಸಿ 'ಜ್ಯೋತಿ' ಹೊತ್ತಿಸುವ ಹೋರಾಟ ನಡೆದಿತ್ತು. ಹೌದು, ಹೋರಾಟಕ್ಕಾಗಿ ಅವರು ಆಗ ಹೊತ್ತಿಸಿದ 'ದಿಯಾ' ಇಂದಿಗೂ ಬೆಳಗುತ್ತಿದೆ.

ರೈತ ಚಳವಳಿಯನ್ನು ಮುರಿಯುವ ಪಿತೂರಿಗಳು ಯಾವ ಯಾವ ರೀತಿಯಲ್ಲಿ ನಡೆಯುತ್ತವೆ ಎನ್ನುವುದರ ಸ್ಪಷ್ಟ ಅರಿವು ರಾಕೇಶ್ ಅವರಿಗಿದೆ. ಹೀಗಾಗಿ ವದಂತಿಗಳಿಗೆ ಕಿವಿಗೊಡದಂತೆ, ಆಮಿಷಗಳಿಗೆ ಬಲಿಯಾಗದಂತೆ, ಬೆದರಿಕೆಗಳಿಗೆ ಬಗ್ಗದಂತೆ ರೈತರಲ್ಲಿ ಜಾಗೃತಿ ಮೂಡಿಸಿದ್ದಾರೆ. 'ಕೃಷಿ ಕಾನೂನುಗಳನ್ನು ವಾಪಸ್ ಪಡೆಯದಿದ್ದರೆ ಡಿಸೆಂಬರ್‌ವರೆಗೂ ದೆಹಲಿ ಗಡಿಯಿಂದ ಕದಲುವುದಿಲ್ಲ' ಎಂದೂ ಘೋಷಿಸಿದ್ದಾರೆ.

'ಕೃಷಿಕರನ್ನು ಇದೇ ರೀತಿ ಸಂಕಷ್ಟದಲ್ಲಿ ನಲುಗುವಂತೆ ಮಾಡಿದರೆ ಹಸಿವಿನ ಚಕ್ರದಲ್ಲಿ ಸಿಲುಕಿ ಒದ್ದಾಡಬೇಕಾದೀತು' ಎಂದು ದೇಶದ ಜನರನ್ನು ಅವರು ಎಚ್ಚರಿಸಿದ್ದಾರೆ. ಕೃಷಿ ಕಾಯ್ದೆಗಳನ್ನು ವಾಪಸ್ ಪಡೆಯುವಂತೆ ನಡೆಸಿರುವ ಮಹಾ ಪಂಚಾಯತ್‌ಗಳಂತೂ ಬಹುದೊಡ್ಡ ಸಂಚಲನವನ್ನೇ ಮೂಡಿಸಿವೆ. ವಿಧಾನಸಭೆ ಚುನಾವಣೆ ಎದುರಿಸುತ್ತಿರುವ ಪಶ್ಚಿಮ ಬಂಗಾಳದಲ್ಲೂ ಮಹಾ ಪಂಚಾಯತ್‌ಗಳು ನಡೆಯುತ್ತಿವೆ. ಮಮತಾ ಬ್ಯಾನರ್ಜಿ ಅವರು ಸ್ಪರ್ಧಿಸುತ್ತಿರುವ ನಂದಿಗ್ರಾಮದಲ್ಲಿ ಕೂಡ ರಾಕೇಶ್ ಅವರು ರೈತ ಸಭೆಯನ್ನು ಸಂಘಟಿಸಿದ್ದಾರೆ. 'ಕೇಂದ್ರ ಸರ್ಕಾರ ರೈತರನ್ನು ಲೂಟಿ ಮಾಡುತ್ತಿದೆ' ಎಂದು ನೇರವಾಗಿಯೇ ಗದಾಪ್ರಹಾರ ನಡೆಸಿದ್ದಾರೆ. ಮಹಾ ಪಂಚಾಯತ್ ನಡೆಸಲು ಅವರು ಕರ್ನಾಟಕಕ್ಕೂ ಬರುತ್ತಿದ್ದಾರೆ.

'ಧನದಾಹಿಗಳಾದ ಉದ್ಯಮಿಗಳ ಮರ್ಜಿಯಲ್ಲಿ ಸರ್ಕಾರ ನಡೆಯುತ್ತಿದೆ. ಪ್ರತಿಯೊಬ್ಬ ವ್ಯಕ್ತಿಗೂ ದಿನಕ್ಕೆ ಎರಡು ಸಲ ಹಸಿವು ಆಗುತ್ತದೆ. ಅಂದರೆ ವರ್ಷಕ್ಕೆ ಸರಾಸರಿ 700 ಬಾರಿ. ಹಸಿವನ್ನು ತಣಿಸಲು ಆಹಾರ ಧಾನ್ಯಗಳು ಬೇಕು. ಆ ಆಹಾರ ಧಾನ್ಯಗಳ ಮೇಲಿನ ನಿಯಂತ್ರಣ ಸಂಪೂರ್ಣ ಉದ್ಯಮಿಗಳ ಕೈಗೆ ಸಿಕ್ಕರೆ ಅವರ ಹಣದ ಹಸಿವು ಕೆಲಸ ಮಾಡಲು ಆರಂಭಿಸುತ್ತದೆ' ಎಂದು ಅವರು ಕುಟುಕುತ್ತಾರೆ. ಇಡೀ ಕೃಷಿಕ ಸಮುದಾಯ ಅವರ ಮಾತನ್ನು ಮೈಯೆಲ್ಲ ಕಿವಿಯಾಗಿ ಕೇಳಿಸಿಕೊಳ್ಳುವುದನ್ನು ಅವರ ಕುರಿತು ಈ ಹಿಂದೆ ಉಡಾಫೆ ಮಾಡಿದವರು ಈಗ ಬೆರಗುಗಣ್ಣಿನಿಂದ ನೋಡುವಂತಾಗಿದೆ. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65